# ಮತೀಯ ಗೂಂಡಾಗಿರಿಯಿಂದ ದ್ವೇಷ ಅಪರಾಧಗಳ ವರೆಗೆ :
# ಅಂಬೇಡ್ಕರ್ ರವರ ಭ್ರಾತೃತ್ವದ ಕನಸಿನ ಮೇಲೆ ದಾಳಿ

**ದಕ್ಷಿಣ ಕನ್ನಡ ಕುರಿತು ವರದಿ, ಜನವರಿ – ಸೆಪ್ಟೆಂಬರ್ 2021**

**ಕಾರ್ಯಕಾರಿ ಸಾರಂಶ**

**ವರದಿ ಪ್ರಕಟಕರು :**

ಪೀಪಲ್ಸ್ ಯೂನಿಯನ್ ಫಾರ್ ಸಿವಿಲ್ ಲಿಬರ್ಟೀಸ್, ಕರ್ನಾಕಟ (ಪಿಯುಸಿಎಲ್–ಕ) ಆಲ್ ಇಂಡಿಯಾ ಲಾಯರ್ಸ್ ಅಸೋಸಿಯೇಷನ್ ಫಾರ್ ಜಸ್ಟಿಸ್ ( ಎಐಎಲ್ಎಜೆ), ಆಲ್ ಇಂಡಿಯಾ ಪೀಪಲ್ಸ್ ಫೋರಮ್ (ಎಐಪಿಎಫ್) ಮತ್ತು Gaurilankeshnews.com

**'ಮತೀಯ ಗೂಂಡಾಗಿರಿಯಿಂದ ದ್ವೇಷ ಅಪರಾಧಗಳವರೆಗೆ: ಅಂಬೇಡ್ಕರ್ ಅವರ ಭ್ರಾತೃತ್ವದ ಕನಸಿನ ಮೇಲಿನ ದಾಳಿಗಳು,'** (***From Communal Policing to Hate Crimes: The Attacks on Ambedkar's Dream of Fraternity)*** ಎಂಬ ಈ ವರದಿಯು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಜನವರಿ 2021 ರಿಂದ ಸೆಪ್ಟೆಂಬರ್ 2021ರ ವರೆಗೆ ನಡೆದ ಮತೀಯ ಗೂಂಡಾಗಿರಿ ಮತ್ತು ಕೋಮು ದ್ವೇಷ ಅಪರಾಧಿಕ ಘಟನೆಗಳ ಹಿನ್ನೆಲೆಯಲ್ಲಿ ನಿರಂತರವಾಗಿ ನಡೆಯುತ್ತಿರುವ ಕೋಮುಗಲಭೆಗಳ ಬಗ್ಗೆ ಬೆಳಕು ಚೆಲ್ಲುತ್ತದೆ.

**ವರದಿಯ ಅಗತ್ಯತೆ**

2021ರ ಮೊದಲ ತ್ರೈಮಾಸಿಕ ಅವಧಿಯಲ್ಲಿ, ದಕ್ಷಿಣ ಕನ್ನಡದಲ್ಲಿ ಹೆಚ್ಚುತ್ತಿರುವ ಕೋಮು ಘಟನೆಗಳ ಕುರಿತು ಮಾಧ್ಯಮಗಳು (ಪತ್ರಿಕೆಗಳು ಮತ್ತು ಆನ್‌ಲೈನ್) ಹೆಚ್ಚಿನ ಮಟ್ಟದಲ್ಲಿ ವರದಿ ಮಾಡುತ್ತಿದ್ದ ಹಿನ್ನೆಲೆಯಲ್ಲಿ ಸತ್ಯಶೋಧನೆಯನ್ನು ಕೈಗೊಳ್ಳಲಾಗಿದೆ. ಜನರ ಹಕ್ಕುಗಳಿಗಾಗಿ ಹೋರಾಟ ಮಾಡುವ ಅನೇಕ ಸಂಘ–ಸಂಸ್ಥೆಗಳು, ಅದರಲ್ಲೂ ರಾಜ್ಯದ ರಾಜಧಾನಿಯಲ್ಲಿ ಈ ಸಮಸ್ಯೆಯನ್ನು ಕೈಗೆತ್ತಿಕೊಂಡ ನಂತರ, ಈ ಘಟನೆಗಳನ್ನು ಎಲ್ಲಾ ದಿಕ್ಕಿನಲ್ಲಿ ಅಧ್ಯಾಯನ ಮಾಡಿ ಅರ್ಥಮಾಡಿಕೊಂಡು ಪರಿಹಾರ ಕಂಡುಕೊಳ್ಳುವುದಕ್ಕಾಗಿ ಸತ್ಯಶೋಧನಾ ತಂಡವನ್ನು ರಚಿಸಲಾಗಿದೆ. ದಕ್ಷಿಣ ಕನ್ನಡದಲ್ಲಿ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿಯವರು ಮತೀಯ ಗೂಂಡಾಗಿರಿಯನ್ನು ಬಹಿರಂಗವಾಗಿ ಸಮರ್ಥಿಸಿ ಹೇಳಿಕೆ ನೀಡಿದ್ದನ್ನು, ಸಾಮಾಜಿಕ ಸಂಘಟನೆಗಳು, ನಾಗರೀಕರು, ವಿದ್ಯಾರ್ಥಿಗಳು, ವಕೀಲರು ಮತ್ತು ವಿರೋಧ ಪಕ್ಷದ ನಾಯಕರುಗಳು ತೀವ್ರವಾಗಿ ವಿರೋಧಿಸಿದ್ದರು. ಈ ಹಿನ್ನೆಲೆಯಲ್ಲಿ ನಾವು ಎಂತಹ ಗಂಭೀರ ಪರಿಸ್ಥಿತಿಯಲ್ಲಿ ಇದ್ದೇವೆ ಎನ್ನುವುದನ್ನು ಈ ವರದಿಯು ಉಲ್ಲೇಖಿಸುತ್ತದೆ.

**ಮತೀಯ ಗೂಂಡಾಗಿರಿಯಿಂದ ದ್ವೇಷ ಅಪರಾಧಗಳ ವರೆಗೆ**

'ಪಿಯುಸಿಎಲ್–ಕರ್ನಾಟಕ' ಪ್ರಕಟಿಸಿದ್ದ "ದಕ್ಷಿಣ ಕನ್ನಡದಲ್ಲಿ ಸಾಂಸ್ಕೃತಿಕ ಗೂಂಡಾಗಿರಿ: ರಕ್ಷಕರ ಹೆಸರಲ್ಲಿ ಮಹಿಳೆಯರು ಮತ್ತು ಅಲ್ಪಸಂಖ್ಯಾತರ ಮೇಲಿನ ದಾಳಿಗಳು, 2008–9" (*"Cultural Policing in Dakshina Kannada: Vigilante Attacks on Women and Minorities, 2008-9")* ಹಾಗೂ 'ಪಿಯುಸಿಎಲ್' ಮತ್ತು 'ಮಹಿಳೆಯರ ಮೇಲಿನ ದೌರ್ಜನ್ಯಗಳ ವಿರುದ್ಧ ವೇದಿಕೆ' ಸಂಸ್ಥೆಗಳು ಜಂಟಿಯಾಗಿ

ಸೆಪ್ಟೆಂಬರ್ 2012ರಲ್ಲಿ ಪ್ರಕಟಿಸಿದ್ದ "ಪಬ್‌ಗಳು ಮತ್ತು ಜನ್ಮದಿನದ ಪಾರ್ಟಿಗಳ ಮೇಲೆ ದಾಳಿ ಮಾಡುವುದು : ಹಿಂದುತ್ವ ಮೂಲಭೂತ ವಾದಿಗಳಿಂದ ಮತೀಯ ಗೂಂಡಾಗಿರಿ" (*"Attacking Pubs and Birthday Parties: Communal Policing by Hindutva Outfits")* ಎಂಬ ವರದಿಗಳ ಮುಂದುವರಿಕೆಯ ಭಾಗವಾಗಿ ಈ ವರದಿಯನ್ನು ನೋಡಬೇಕು. ದಕ್ಷಿಣ ಕನ್ನಡದಲ್ಲಿ ನೆಲೆಯೂರಿರುವ ನಿರಂತರ ಕೋಮುವಾದಿ ಕಾರ್ಯಸೂಚಿಯು ಪ್ರಸ್ತುತ ದಿನಗಳಲ್ಲಿ ನಡೆಸುತ್ತಿರುವ ಹಿಂಸಾಚಾರದ ಮೃಗೀಯ ಸ್ವರೂಪವನ್ನು ಅರ್ಥಮಾಡಿಕೊಳ್ಳಲು 'ಮತೀಯ ಗೂಂಡಾಗಿರಿ' ಶಬ್ಧವು ಅಸಮರ್ಪಕವಾಗಿರುತ್ತದೆ. ಆದ್ದರಿಂದ, ನಾವು "ಕೋಮು ದ್ವೇಷ ಅಪರಾಧಗಳು" (**"communal hate crimes**") ಎಂಬ ಪೂರಕ ಶಬ್ಧವನ್ನು ಬಳಸಿ ವ್ಯಾಖ್ಯಾನವನ್ನು ಪ್ರಸ್ತಾಪಿಸುತ್ತೇವೆ. ಜನಾಂಗ, ಜಾತಿ, ಧರ್ಮ, ಲೈಂಗಿಕ ಅಭಿಲಾಷೆ, ವಿಕಲಚೇತನ ಮತ್ತು ತೃತೀಯ ಲಿಂಗದ ಆಧಾರದ ಮೇಲೆ ಹಗೆತನವನ್ನು ಪ್ರೇರೇಪಿಸಲ್ಪಟ್ಟ ಯಾವುದೇ ಅಪರಾಧವು ದ್ವೇಷ ಅಪರಾಧವಾಗುತ್ತದೆ.

ದ್ವೇಷ ಅಪರಾಧದ ಪರಿಕಲ್ಪನೆಯಿಂದ ನೊಂದವ್ಯಕ್ತಿಗಳಿಗೆ ಆಗಿರುವ ಹಾನಿಯನ್ನು ಗುರುತಿಸಲು ಸಾಧ್ಯವಾಗುತ್ತದೆ ಮತ್ತು ಅಂತಹ ಅಪರಾಧಗಳು ಸಾಮಾಜಿಕ ಶ್ರೇಣಿಕೃತ ವ್ಯವಸ್ಥೆ ಮತ್ತು ವ್ಯತ್ಯಾಸಗಳಿಂದಲೇ ನಡೆಯುತ್ತವೆ ಎನ್ನುವುದು ಸಹ ವಾಸ್ತವ ಸಂಗತಿಯಾಗಿರುತ್ತದೆ.

ಅಲ್ಲದೆ ಈ ವರದಿಯು ದಕ್ಷಿಣ ಕನ್ನಡದಲ್ಲಿ ಜನವರಿ 2021 ರಿಂದ ಸೆಪ್ಟೆಂಬರ್ 2021 ರವರೆಗೆ ನಡೆದ ಮತೀಯ ಗೂಂಡಾಗಿರಿ ಮತ್ತು ದ್ವೇಷದ ಅಪರಾಧಿಕ ಘಟನೆಗಳನ್ನು ವಿಶ್ಲೇಷಿಸುತ್ತದೆ ಮತ್ತು ಆರು ವಿಭಿನ್ನ ಮಾದರಿಯ ಘಟನೆಗಳನ್ನು ಗುರುತಿಸುತ್ತದೆ. ಈ ಆರು ವಿಭಿನ್ನ ಮಾದರಿಯ ಘಟನೆಗಳೆಂದರೆ:– (ಎ) ಸಾಮಾಜಿಕ ಪ್ರತ್ಯೇಕತೆಯನ್ನು ಜಾರಿಗೊಳಿಸುವುದು, (enforcing social segregation) (ಬಿ) ಆತ್ಮೀಯ ಸಂಬಂಧಗಳನ್ನ ನಿಯಂತ್ರಿಸುವುದು (dictating intimacies) (ಸಿ) ಆರ್ಥಿಕ ಮತ್ತು ಸಾಮಾಜಿಕ ಬಹಿಷ್ಕಾರ, (economic and social boycott) (ಡಿ) ಗೋವಿನ ಹೆಸರಿನಲ್ಲಿ ದಾಳಿಗಳು, (attacks in the name of cattle) (ಇ) ಧಾರ್ಮಿಕ ಸ್ವಾತಂತ್ರ್ಯವನ್ನು ನಿಗ್ರಹಿಸುವುದು (curbing religious freedom )ಮತ್ತು (ಎಫ್) ದ್ವೇಷ ಹರಡುವ ಭಾಷಣಗಳನ್ನು ಮಾಡುವುದು (spewing hate speech).

ಈ ಆರು ಮಾದರಿಯ ಘಟನೆಗಳನ್ನು ಎರಡು ಭಾಗಗಳಾಗಿ ವರ್ಗೀಕರಿಸಲಾಗಿದೆ – ಮೊದಲನೆಯದಾಗಿ, ಮಾಧ್ಯಮಗಳಲ್ಲಿ ವರದಿಯಾದ ಘಟನೆಗಳು ಮತ್ತು ಎರಡನೆಯದಾಗಿ, ಸತ್ಯಶೋಧನಾ ತಂಡವು ಗಮನಿಸಿದ ಘಟನೆಗಳು.

ಈ ರೀತಿಯಲ್ಲಿ ಹಿಂದುತ್ವ ಸಂಘಟನೆಯು ಕೋಮು ಧ್ರುವೀಕರಣ (communal polarisation)ವನ್ನು ಸೃಷ್ಟಿಸಲು ನೋಡುತ್ತಿರುವ ವಿವಿಧ ಮಾರ್ಗಗಳನ್ನು ಅರ್ಥಮಾಡಿಕೊಳ್ಳುವ ಪ್ರಯತ್ನವಾಗಿದೆ. ಈ ಎಲ್ಲಾ ರೀತಿಯ ಘಟನೆಗಳು ಮೂಲಭೂತವಾಗಿ ಸಂವಿಧಾನದ ಪೀಠಿಕೆಯಲ್ಲಿರುವ ಭ್ರಾತೃತ್ವದ ಮೌಲ್ಯ ಹಾಗೂ ಘನತೆ, ಸಮಾನತೆ, ಆಯ್ಕೆಯ ಸ್ವಾತಂತ್ರ್ಯದ ಮೂಲಭೂತ ಹಕ್ಕುಗಳ ಮೇಲಿನ ದಾಳಿಯಾಗಿದೆ.

**ಪೊಲೀಸ್ ಮತ್ತು ಜಿಲ್ಲಾಡಳಿತದ ಪ್ರತಿಕ್ರಿಯೆ**

ಈ ವರದಿಯು ಕೋಮು ಉದ್ವಿಗ್ನತೆಗಳು ಹೆಚ್ಚಿರುವ ಪ್ರದೇಶದಲ್ಲಿ ಪೊಲೀಸ್ ಮತ್ತು ಜಿಲ್ಲಾಡಳಿತದ ಪಾತ್ರವನ್ನು ತಿಳಿಸುತ್ತದೆ. ತಂಡವು ಏಪ್ರಿಲ್‌ನಲ್ಲಿ ಭೇಟಿ ನೀಡಿದ ಸಂದರ್ಭದಲ್ಲಿ ಮಂಗಳೂರು ಪೊಲೀಸ್ ಕಮಿಷನರ್ ಮತ್ತು ಉಪ ಪೊಲೀಸ್ ಆಯುಕ್ತ (ಕಾನೂನು ಮತ್ತು ಸುವ್ಯವಸ್ಥೆ) ಮಂಗಳೂರು ಅವರನ್ನು ಭೇಟಿ ಮಾಡಿತ್ತು ಮತ್ತು ವರದಿಯಲ್ಲಿ ಅವರ ಪ್ರತಿಕ್ರಿಯೆಗಳನ್ನು ದಾಖಲಿಸಲಾಗಿದೆ. ಕೋಮು ದ್ವೇಷದ ಅಪರಾಧಗಳಿಗೆ ಸಂಬಂಧಿಸಿದಂತೆ ಕ್ರಮವನ್ನು ಖಾತ್ರಿಪಡಿಸುವಲ್ಲಿ ಮಾತ್ರವಲ್ಲದೆ, ಮುಖ್ಯವಾಗಿ ಅಂತಹ ಅಪರಾಧಗಳನ್ನು ತಡೆಗಟ್ಟುವಲ್ಲಿ ಮತ್ತು ದ್ವೇಷದ ನಿರಂತರ ಹರಡುವಿಕೆಯನ್ನು ತಡೆಗಟ್ಟುವಲ್ಲಿ ಪೊಲೀಸರು ಅತ್ಯಗತ್ಯ ಪಾತ್ರವನ್ನು ವಹಿಸಬೇಕಾಗುತ್ತದೆಂದು ವರದಿಯು ಗುರುತಿಸುತ್ತದೆ. ದ್ವೇಷ ಅಪರಾಧಗಳ ಪ್ರಕರಣಗಳಲ್ಲಿ ರಾಜ್ಯದ ಪಾತ್ರವನ್ನು ಮೂರು ಹಂತದಲ್ಲಿ ಕಾಣಬಹುದು: 1. ಘಟನೆ ನಡೆಯುವ ಸಂಭವವನ್ನು ತಡೆಗಟ್ಟಲು ಕ್ರಮಗಳನ್ನು ತೆಗೆದುಕೊಳ್ಳುವುದು, 2. ಅಂತಹ ಘಟನೆಯ ಸಂದರ್ಭದಲ್ಲಿ ದಂಡನಾತ್ಮಕ ಕ್ರಮಗಳನ್ನು ತೆಗೆದುಕೊಳ್ಳುವುದನ್ನು ಖಚಿತಪಡಿಸಿಕೊಳ್ಳುವುದು ಮತ್ತು 3. ಅಂತಹ ಅಪರಾಧಗಳಿಗೆ ಬಲಿಯಾದವರಿಗೆ ಪರಿಹಾರ ಕ್ರಮಗಳನ್ನು ಕೈಗೊಳ್ಳುವುದು. ಅಂತರ–ಧರ್ಮೀಯ ಸಂಬಂಧಗಳಿಗೆ ತೊಂದರೆಯುಂಟುಮಾಡಿದ ಹೆಚ್ಚಿನ ಸಂಖ್ಯೆಯ ಪ್ರಕರಣಗಳಲ್ಲಿ ಆರೋಪಿಗಳ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿಲ್ಲ ಬದಲಾಗಿ ಅಂತರ–ಧರ್ಮೀಯ ಸ್ನೇಹಿತರು ಅಥವಾ ದಂಪತಿಗಳನ್ನೇ ಪೊಲೀಸ್ ಠಾಣೆಗೆ ಕರೆಸಲಾಗುತ್ತಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ಒಂದೆಡೆ ಈ ಹಿಂಸಾಚಾರ ಎಸಗಿದವರ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಿದ್ದರೂ, ಪೊಲೀಸರು ಒಂದು ಹೆಜ್ಜೆ ಮುಂದೆ ಹೋಗಿ ಸಂತ್ರಸ್ತರನ್ನು ಠಾಣೆಗೆ ಕರೆದೊಯ್ದು ಪ್ರಶ್ನಿಸುವ ಮೂಲಕ ತಪ್ಪಿತಸ್ಥರೆಂದು ಪರಿಗಣಿಸುತ್ತಾರೆ. ಈ ಹಿನ್ನೆಲೆಯಲ್ಲಿ ಅಂತರ್ ಧರ್ಮಿಯ ಸಂಬಂಧಗಳನ್ನು ಬಲವಂತವಾಗಿ ಪ್ರತ್ಯೇಕಿಸುವ ಪ್ರಕ್ರಿಯೆಯಲ್ಲಿ ಪೋಲೀಸರು ಆರೋಪಿಗಳಿಗೆ ಮಿತ್ರರಾಗಿದ್ದಾರೆ ಎಂದು ವರದಿಯು ಗಮನಿಸುತ್ತದೆ. ಇದು ಕಾನೂನಿಗೆ ವಿರುದ್ಧವಾಗಿದೆ ಮತ್ತು ತೆಹ್ಸೀನ್ ಪೂನಾವಾಲಾ ವರ್ಸಸ್ ಯೂನಿಯನ್ ಆಫ್ ಇಂಡಿಯಾ [AIR 2018 SC 3354] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ನೀಡಿದ ಆದೇಶಕ್ಕೆ ವಿರುದ್ಧವಾಗಿದೆ, ಈ

ಪ್ರಕರಣದಲ್ಲಿ ""ಅವ್ಯವಸ್ಥೆ ಮತ್ತು ಅರಾಜಕತೆಯ ಸಮಯದಲ್ಲಿ, ರಾಜ್ಯವು ತನ್ನ ನಾಗರಿಕರಿಗೆ ಸಾಂವಿಧಾನಿಕ ಭರವಸೆಗಳನ್ನು ರಕ್ಷಿಸಲು ಮತ್ತು ಭದ್ರಪಡಿಸಲು ಧನಾತ್ಮಕವಾಗಿ ಮತ್ತು ಜವಾಬ್ದಾರಿಯುತವಾಗಿ ಕಾರ್ಯನಿರ್ವಹಿಸಬೇಕು"." (*In times of chaos and anarchy, the State has to act positively and responsibly to safeguard and secure the constitutional promises to its citizens")* ಎಂದು ಆದೇಶಿಸಲಾಗಿದೆ.

**ಭ್ರಾತೃತ್ವ ಮೇಲೆ ದಾಳಿ ಮತ್ತು ಸಾಮಾಜಿಕ ವರ್ಗೀಕರಣ (Social Apartheid) ವ್ಯವಸ್ಥೆಯ ಮುಂದುವರಿಕೆ**

ಅಲ್ಪಸಂಖ್ಯಾತ ಸಮುದಾಯದ ವ್ಯಕ್ತಿಗಳ ಮೇಲೆ ನಡೆಯುವ ದಾಳಿಗಳು ಅವರನ್ನು ಅಧೀನಗೊಳಿಸುವ ಉದ್ದೇಶದಿಂದ ಮಾಡಲಾಗಿದೆ ಎಂದು ವರದಿಯಲ್ಲಿ ತಿಳಿಸಲಾಗಿದೆ. ಸಾಮಾಜಿಕ ಪ್ರತ್ಯೇಕತೆಯನ್ನು ಜಾರಿಗೊಳಿಸುವ ಮತ್ತು ಅನ್ಯೋನ್ಯತೆಯಿಂದರುವ ಸಂಬಂಧಗಳನ್ನು ನಿಯಂತ್ರಿಸುವ ಪ್ರಕ್ರಿಯೆಯ ಮೂಲಕ, ಸಾಂವಿಧಾನಿಕ ತತ್ವವಾದ ಭ್ರಾತೃತ್ವದ ವಿರುದ್ಧ ಆಕ್ರಮಣವನ್ನು ಪ್ರಾರಂಭಿಸಲಾಗುತ್ತದೆ, ಅಲ್ಲಿ ವಿವಿಧ ಧರ್ಮಗಳ ವ್ಯಕ್ತಿಗಳು ಯಾವುದೇ ರೀತಿಯಲ್ಲಿ ಪರಸ್ಪರ ಬೆರೆಯುವುದನ್ನು ಪರಿಣಾಮಕಾರಿಯಾಗಿ ನಿಷೇಧಿಸಲಾಗಿದೆ. ಆರ್ಥಿಕ ಬಹಿಷ್ಕಾರ ಮತ್ತು ಗೋವುಗಳ ಹೆಸರಿನಲ್ಲಿ ನಡೆಯುವ ದಾಳಿಯು ಧಾರ್ಮಿಕ ಅಲ್ಪಸಂಖ್ಯಾತರ ಮೇಲೆ ನಡೆಯುವ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕವಾದ ದಾಳಿಯಾಗಿದೆ. ಯಾವ ಆಹಾರವನ್ನು ಸೇವಿಸಬಹುದು ಎಂಬುದನ್ನು ನಿರ್ಧರಿಸುವ ಮೂಲಕ ಮತ್ತು ಸಂಸ್ಕೃತಿಯ ಭಾಗವಾಗಿರುವ ಆಹಾರವನ್ನು ತಿನ್ನುವುದನ್ನು ನಿಷೇಧಿಸುವ ಮೂಲಕ, ಅಲ್ಪಸಂಖ್ಯಾತರ ಸಾಮಾಜಿಕ ಮತ್ತು ಸಾಂಸ್ಕೃತಿಕ ಜೀವನದ ಮೇಲೆ ಸ್ಪಷ್ಟವಾದ ಆಕ್ರಮಣ ಮಾಡಲಾಗುತ್ತಿದೆ. ಆರ್ಥಿಕ ಬಹಿಷ್ಕಾರದ ಕರೆಗಳು ಮತ್ತು ಗೋಹತ್ಯೆ ನಿಷೇಧವು ಅವರ ಆರ್ಥಿಕ ಜೀವನದ ಮೇಲೆ ನೇರ ಪರಿಣಾಮ ಬೀರುತ್ತದೆ. ಧಾರ್ಮಿಕ ಸ್ವಾತಂತ್ರ್ಯವನ್ನು ನಿಗ್ರಹಿಸುವ ನಿಟ್ಟಿನಲ್ಲಿ ತೆಗೆದುಕೊಂಡ ಕ್ರಮಗಳಿಂದಾಗಿ ಧಾರ್ಮಿಕ ಅಲ್ಪಸಂಖ್ಯಾತರು ಕೇವಲ ತಮ್ಮ ನಂಬಿಕೆಯನ್ನು ಆಚರಣೆ ಮಾಡುವುದಕ್ಕಾಗಿ ಅಪಾಯವನ್ನು ಎದುರಿಸಬೇಕಾಗಿದೆ ಮತ್ತು  ಅಲ್ಲಿ ಅವರ ನಂಬಿಕೆಯ ಸಂಕೇತಗಳು ಆಕ್ರಮಣದ ವಸ್ತುಗಳಾಗಿದ್ದಾವೆ. ದ್ವೇಷ ಹರಡುವ ಭಾಷಣದ ಮೂಲಕ, ಇಡೀ ಸಮುದಾಯವನ್ನು ಅಮಾನವೀಯಗೊಳಿಸಲಾಗಿದೆ ಮತ್ತು ಅವರ ವಿರುದ್ಧ ಹಿಂಸಾಚಾರ ನಡೆಸುವುದಕ್ಕಾಗಿ ಮುಕ್ತವಾಗಿ ಕರೆಗಳನ್ನು ನೀಡಲಾಗುತ್ತಿದೆ. ಈ ರೀತಿಯಲ್ಲಿ ಕೋಮು ಅಧೀನತೆಯ ಪ್ರಕ್ರಿಯೆ ನಡೆಯುತ್ತದೆ.

ಪ್ರತ್ಯೇಕತೆ, ತಾರತಮ್ಯ ಮತ್ತು ಅಧೀನತೆಯ ಈ ಪ್ರಕ್ರಿಯೆಗಳು ಸಂವಿಧಾನವನ್ನು ಸಂಪೂರ್ಣವಾಗಿ ಉಲ್ಲಂಘನೆ ಮಾಡುತ್ತವೆ ಎಂಬ ವಾಸ್ತವ ಸಂಗತಿಯ ಹೊರತಾಗಿಯೂ ಸಾಮಾಜಿಕ ನಿಯಮಗಳು

ವ್ಯಕ್ತಿಗಳ ಚಟುವಟಿಕೆಗಳನ್ನು ನಿರ್ದೇಶಿಸುವ ಪರಿಸ್ಥಿತಿಗೆ ಕಾರಣವಾಗುತ್ತವೆ ಎಂದು ವರದಿಯು ತಿಳಿಸುತ್ತದೆ. ಕೋಮು ಅಧೀನತೆಯ ಪ್ರಕ್ರಿಯೆಯು ಧಾರ್ಮಿಕ ಅಲ್ಪಸಂಖ್ಯಾತರನ್ನು ಸೃಷ್ಟಿಸುತ್ತದೆ, ಸಾಮಾಜಿಕ ಜಾಗರೂಕ ಗುಂಪುಗಳೆಂದು ಕರೆಸಿಕೊಳ್ಳುವವರು ತೆಗೆದುಕೊಳ್ಳುವ ಕಾನೂನು ಬಾಹಿರ ಕ್ರಮಗಳು ಮತ್ತು ರಾಜ್ಯದ ಜಟಿಲ ನಡವಳಿಕೆಯ ಮೂಲಕ ಇವರನ್ನು ಪ್ರತ್ಯೇಕವಾಗಿ ನೋಡಲಾಗುತ್ತದೆ ಮತ್ತು ಸಮಾನ ಪೌರತ್ವ ಹಕ್ಕುಗಳನ್ನು ನಿರಾಕರಿಸಲಾಗುತ್ತದೆ. ಈ ಕ್ರಮವನ್ನು ಸಾಮಾಜಿಕ ವರ್ಗೀಕರಣ (Apartheid) ವ್ಯವಸ್ಥೆಯ ಜಾರಿ ಎಂದು ವರದಿಯು ಅರ್ಥೈಸುತ್ತದೆ. ಸಾಮಾಜಿಕ ವರ್ಗೀಕರಣ ವ್ಯವಸ್ಥೆಯು ಸ್ವಯಂಪ್ರೇರಿತ ಪ್ರತ್ಯೇಕತೆಯನ್ನು ಅಥವಾ ಸಮಾಜದ ಪ್ರಬಲ ವಿಭಾಗಗಳಿಂದ ಜಾರಿಗೊಳಿಸಲಾದ ಪ್ರತ್ಯೇಕತೆಯನ್ನು ಕಾನೂನಿನಿಂದ ಕಡ್ಡಾಯಗೊಳಿಸಿದ ಪ್ರತ್ಯೇಕತೆಗೆ ಪರಿವರ್ತಿಸುವ ವಿದ್ಯಮಾನವಾಗಿದೆ. ದಕ್ಷಿಣ ಕನ್ನಡದಲ್ಲಿ ಈ ಸಾಮಾಜಿಕ ವರ್ಗೀಕರಣ ವ್ಯವಸ್ಥೆಯನ್ನು ಹುಟ್ಟು ಹಾಕುತ್ತಿರುವುದು ಹಿಂದುತ್ವ ಸಂಘಟನೆಗಳ ಕಟ್ಟಳೆಗಳೇ ಹೊರತು ಬೇರೆವುದಲ್ಲಾ ಎಂದು ವರದಿಯು ತಿಳಿಸಿದೆ.

ಕಾನೂನಿನಿಂದ ರಚಿಸಲ್ಪಟ್ಟ ಪ್ರತ್ಯೇಕತೆಯ ಕಲ್ಪನೆ ಮತ್ತು ಸಮಾಜದಿಂದ ಅನುಮೋದಿಸಲ್ಪಟ್ಟ ಪ್ರತ್ಯೇಕತೆಯ ಕಲ್ಪನೆಯನ್ನು ಸಂವಿಧಾನವು ತಿರಸ್ಕರಿಸಿದೆ. ಭ್ರಾತೃತ್ವದ ಪರಿಕಲ್ಪನೆಯಲ್ಲಿ ದೇಶದ ಜನರು ಮುಕ್ತವಾಗಿ ಪರಸ್ಪರ ಸಂವಹನ ನಡೆಸಬಹುದು ಎಂದು ಸಂವಿಧಾನವು ಖಚಿತಪಡಿಸಿದೆ. ಡಾ. ಅಂಬೇಡ್ಕರ್ ಅವರು ವಾಸ್ತವವಾಗಿ ಭ್ರಾತೃತ್ವವು ಪ್ರಜಾಪ್ರಭುತ್ವದ ಇನ್ನೊಂದು ಹೆಸರು ಎಂದು ಹೇಳುತ್ತಾರೆ. ಭ್ರಾತೃತ್ವದ ಮೇಲೆ ನಡೆಯುತ್ತಿರುವ ಸಂಘಟಿತ ದಾಳಿಯಿಂದ, ಆಕ್ರಮಣಕ್ಕೆ ಒಳಗಾಗುತ್ತಿರುವುದು ಪ್ರಜಾಪ್ರಭುತ್ವವೇ ಆಗಿದೆ.

**ಸಾಂವಿಧಾನಿಕ ಪ್ರತಿಕ್ರಿಯೆಯನ್ನು ರೂಪಿಸುವುದು**

ಸಾಮಾಜಿಕ ಪ್ರತ್ಯೇಕತಾ ನೀತಿ ಮತ್ತು ಭ್ರಾತೃತ್ವದ ಮೇಲಿನ ನಿರಂತರ ದಾಳಿಯ ಪರಿಸ್ಥಿತಿಗೆ ಪ್ರತಿಕ್ರಿಯಿಸುವ ತುರ್ತು ಅಗತ್ಯವನ್ನು ವರದಿಯು ಗುರುತಿಸುತ್ತದೆ. ಕೋಮು ದ್ವೇಷದ ಅಪರಾಧಗಳು ಮತ್ತು ಮತೀಯ ಗೂಂಡಾಗಿರಿ ಕೇವಲ ಅಲ್ಪಸಂಖ್ಯಾತ ಸಮುದಾಯದ ವಿರುದ್ಧ ಮಾತ್ರವಲ್ಲದೆ ಸಮಾಜದ ವಿರುದ್ಧದ ಹಿಂಸಾಚಾರದ ಕೃತ್ಯಗಳಾಗಿವೆ ಎಂದು ಅದು ಗಮನಿಸುತ್ತದೆ. ಅವರು ಸಾಮಾಜಿಕ ವರ್ಗೀಕರಣ ವ್ಯವಸ್ಥೆಯನ್ನು ಜಾರಿ ಮಾಡುವ ಮೂಲಕ ಸಾಮಾಜಿಕ ರಚನೆಯಲ್ಲಿ ಪ್ರತ್ಯೇಕತೆಯನ್ನು ಸಾಂಸ್ಥಿಕಗೊಳಿಸಲು ಪ್ರಯತ್ನಿಸುತ್ತಾರೆ. ಸಾಮಾಜಿಕ ವರ್ಗೀಕರಣ ವ್ಯವಸ್ಥೆಯು ಸಮಾಜದ ರಚನೆಯನ್ನು ಮತ್ತು ನಮ್ಮ ಸಂವಿಧಾನದ ಅಡಿಪಾಯವನ್ನು ರೂಪಿಸುವ ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವದ ಕಲ್ಪನೆಗಳನ್ನು ನಾಶಪಡಿಸುತ್ತದೆ. ವರದಿಯು ಸಾಮಾಜಿಕ ಪ್ರತ್ಯೇಕತೆಯ ವಿರುದ್ಧ ಹೋರಾಡುವ ತುರ್ತು ಅಗತ್ಯವನ್ನು ಮತ್ತು ಡಾ ಅಂಬೇಡ್ಕರ್ ಅವರು ಯೋಜಿಸಿದಂತೆ ಸಹಬಾಳ್ವೆ ಜೀವನ (associated living)

ನಡೆಸುವುದನ್ನು ಮತ್ತು ಕೋಮು ಮತ್ತು ಜಾತಿಗಳ ನಡುವೆ ಐಕ್ಯತೆಯನ್ನು ರೂಪಿಸಲು ವಿಶೇಷ ಗಮನ ಸೆಳೆಯುತ್ತದೆ. ಸಾಂವಿಧಾನಿಕ ನೈತಿಕತೆ ಮತ್ತು ಸಂವಿಧಾನ ಪೀಠಿಕೆಯಲ್ಲಿರುವ ಭ್ರಾತೃತ್ವ ತತ್ವದ ಮೂಲಕ ಪ್ರತಿಕ್ರಿಯೆಯನ್ನು ಅಗತ್ಯವಾಗಿ ರೂಪಿಸಬೇಕು ಎಂದು ತಿಳಿಸುತ್ತದೆ.

**ಶಿಫಾರಸುಗಳು**

ಈ ವರದಿಯು ಹಲವಾರು ಶಿಫಾರಸುಗಳನ್ನು ನೀಡುತ್ತದೆ, ಇವುಗಳನ್ನು ಕೆಳಗೆ ಸಂಕ್ಷಿಪ್ತವಾಗಿ ತಿಳಿಸಲಾಗಿದೆ.

## I. ರಾಜ್ಯ ಸರ್ಕಾರಕ್ಕೆ:

1. ಸರ್ವೋಚ್ಚ ನ್ಯಾಯಾಲಯದ ಆದೇಶಗಳನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡುವುದನ್ನು ಖಚಿತಪಡಿಸಿಕೊಳ್ಳಬೇಕು.

1) ತೆಹಸೀನ್ ಎಸ್. ಪೂನಾವಲ್ಲ ವಿರುದ್ಧ ಯೂನಿಯನ್ ಆಫ್ ಇಂಡಿಯಾ [AIR 2018 SC 3354 ] ಮತ್ತು ಶಕ್ತಿ ವಾಹಿನಿ ವಿರುದ್ಧ ಯೂನಿಯನ್ ಆಫ್ ಇಂಡಿಯಾ [AIR 2018 SC 1601]ಗಳಲ್ಲಿ ಸರ್ವೋಚ್ಚ ನ್ಯಾಯಾಲಯ ನೀಡಿರುವ ಆದೇಶವನ್ನು ಕಟ್ಟುನಿಟ್ಟಾಗಿ ಜಾರಿಗೊಳಿಸಲಾಗಿದೆ ಎನ್ನುವುದನ್ನು ಖಚಿತಪಡಿಸಿಕೊಳ್ಳಬೇಕು.
2) ಸರ್ವೋಚ್ಚ ನ್ಯಾಯಾಲಯ ವಿವರಿಸಿರುವ ಪ್ರೀತಿಯ ಹಕ್ಕು ಸೇರಿದಂತೆ ಆಯ್ಕೆ ಮಾಡುವ ಹಕ್ಕನ್ನು ಎತ್ತಿಹಿಡಿಯಲಾಗಿದೆ ಎಂದು ಖಚಿತಪಡಿಸಿಕೊಳ್ಳಬೇಕು.

3) ಲತಾ ಸಿಂಗ್ ವಿರುದ್ಧ ಸ್ಟೇಟ್ ಆಫ್ ಯು.ಪಿ ಮತ್ತು ಇತರರು [(2006) 5 SCC 475] ಪ್ರಕರಣದಲ್ಲಿ ಸರ್ವೋಚ್ಚ ನ್ಯಾಯಾಲಯ ನೀಡಿರುವ ಆದೇಶವನ್ನು ಕಟ್ಟುನಿಟ್ಟಾಗಿ ಪಾಲನೆ ಮಾಡಲಾಗುತ್ತಿದಿಯಾ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ಅಂತರ-ಜಾತಿ ಅಥವಾ ಅಂತರ್ ಧಾರ್ಮಿಕ ದಂಪತಿಗಳು ಯಾರಿಂದಲೂ ಕಿರುಕುಳಕ್ಕೊಳಗಾಗುವುದಿಲ್ಲ ಅಥವಾ ಬೆದರಿಕೆಗಳು ಅಥವಾ ಹಿಂಸಾಚಾರದ ಕೃತ್ಯಗಳಿಗೆ ಒಳಗಾಗುವುದಿಲ್ಲ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು. ಅಂತಹ ಬೆದರಿಕೆ ಅಥವಾ ಕಿರುಕುಳ ಅಥವಾ ಹಿಂಸಾಚಾರವನ್ನು ಮಾಡುವ ವ್ಯಕ್ತಿಗಳ ವಿರುದ್ಧ ಪೊಲೀಸರು ಕ್ರಿಮಿನಲ್ ಪ್ರಕರಣ ದಾಖಲು ಮಾಡಿ ಕಾನೂನಿನ ಪ್ರಕಾರ ಕಠಿಣ ಕ್ರಮ ತೆಗೆದುಕೊಳ್ಳಲಾಗುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

4) ಅರುಮುಗಂ ಸರ್ವೈ ವಿರುದ್ಧ ತಮಿಳುನಾಡು ರಾಜ್ಯ [AIR 2011 SC 1859] ನಲ್ಲಿ ಸರ್ವೋಚ್ಚ ನ್ಯಾಯಾಲಯ ನೀಡಿರುವ ಆದೇಶವನ್ನು ಪಾಲನೆ ಮಾಡುಲಾಗುತ್ತಿದಿಯಾ ಎಂಬುವುದನ್ನು ಖಚಿತಪಡಿಸಿಕೊಳ್ಳಬೇಕು ಹಾಗೂ ಅಂತರ್ ಧರ್ಮಿಯ ಮತ್ತು ಅಚಿತರ್ ಜಾತಿ ವಿವಾಹವಾದ ದಂಪತಿಗಳಿಗೆ ಕಿರುಕುಳ ಕೊಡುವ ಯಾವುದೇ ಘಟನೆಗಳು ಸಂಭವಿಸಿದಲ್ಲಿ, ಅಂತಹ ದುಷ್ಕೃತ್ಯಗಳಿಗೆ ಕಾರಣರಾದವರ ವಿರುದ್ಧ ಕ್ರಿಮಿನಲ್ ಪ್ರಕರಣಗಳನ್ನು ದಾಖಲು ಮಾಡಬೇಕು. ಅಲ್ಲದೆ ರಾಜ್ಯ ಸರ್ಕಾರಕ್ಕೆ ನಿರ್ದೇಶಿಸಲಾಗಿರುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ 1. ಘಟನೆಯ ಬಗ್ಗೆ ಮುಂಚಿತವಾಗಿ ಜ್ಞಾನವಿದ್ದು, ಘಟನೆ ಇನ್ನೂ ಸಂಭವಿಸದಿದ್ದಾರೆ ಮತ್ತು ಅ ಘಟನೆಯನ್ನು ತಡೆಯದಿದ್ದರೆ ಅಥವಾ (2) ಅದು ಸಂಭವಿಸಿದಲ್ಲಿ, ತಪ್ಪಿತಸ್ಥರು ಮತ್ತು ಇತರರನ್ನು ತ್ವರಿತವಾಗಿ ಬಂಧಿಸದಿದ್ದಲ್ಲಿ ಮತ್ತು ಅವರ ವಿರುದ್ಧ ಕ್ರಿಮಿನಲ್ ದಾಖಲು ಮಾಡಿರದಿದ್ದಾರೆ, ನಮ್ಮ ಅಭಿಪ್ರಾಯದಲ್ಲಿ ಅಂತಹ ಅಧಿಕಾರಿಗಳೇ ಇಂತಹ ಘಟನೆಗಳಿಗೆ ನೇರವಾಗಿ ಅಥವಾ ಪರೋಕ್ಷವಾಗಿ ಜವಾಬ್ದಾರರು ಎಂದು ಪರಿಗಣಿಸಲಾಗುತ್ತದೆ. ಹೀಗಾಗಿ ಜಿಲ್ಲೆಯ ಜಿಲ್ಲಾ ಮ್ಯಾಜಿಸ್ಟ್ರೇಟ್/ಕಲೆಕ್ಟರ್ ಮತ್ತು ಎಸ್‌ಎಸ್‌ಪಿ/ಎಸ್‌ಪಿಗಳು ಹಾಗೂ ಸಂಬಂಧಪಟ್ಟ ಇತರ ಅಧಿಕಾರಿಗಳನ್ನು ತಕ್ಷಣವೇ ಅಮಾನತುಗೊಳಿಸುವುದು ಮತ್ತು ಅವರ ವಿರುದ್ಧ ಚಾರ್ಜ್ ಶೀಟ್ ಮಾಡುವುದು ಮತ್ತು ಅವರ ವಿರುದ್ಧ ಇಲಾಖಾವಾರು ಕ್ರಮ ಜರುಗಿಸುವುದು ಎಂದು ಸರ್ವೋಚ್ಚ ನ್ಯಾಯಾಲಯ ಆದೇಶಿದೆ.

## II. ಕಾನೂನು ಮತ್ತು ಸುವ್ಯವಸ್ಥೆಯ ನಿರ್ವಹಣೆಯನ್ನು ಖಚಿತಪಡಿಸಿಕೊಳ್ಳಬೇಕು

1. ಕರ್ನಾಟಕ ಸರ್ಕಾರಕ್ಕೆ ಯಾವುದೇ ಸಮಾನಾಂತರ ಆಡಳಿತವಿಲ್ಲ ಎಂದು ಖಚಿತಪಡಿಸಿಕೊಳ್ಳಬೇಕು ಮತ್ತು ನಿರ್ದಿಷ್ಟವಾಗಿ ಕೋಮು ಹಿಂಸಾಚಾರದಲ್ಲಿ ತೊಡಗಿರುವ ಎಲ್ಲಾ

ಹಿಂದುತ್ವ ಸಂಘಟನೆಗಳ ಸದಸ್ಯರ ವಿರುದ್ಧ ಭಾರತೀಯ ದಂಡ ಸಂಹಿತೆಯ ಕಲಂಗಳಡಿಯಲ್ಲಿ ಕಠಿಣ ಕ್ರಮವನ್ನು ಕೈಗೊಳ್ಳಬೇಕು.

2. ದ್ವೇಷ ಅಪರಾಧಗಳು ಮತ್ತು ಮತೀಯ ಗೂಂಡಾಗಿರಿಯ ಎಲ್ಲಾ ಪ್ರಕರಣಗಳಲ್ಲಿ ತಕ್ಷಣವೇ ಎಫ್ಐಆರ್ ದಾಖಲಿಸಲಾಗಿದಿಯಾ ಎಂಬುದನ್ನು ಖಚಿತಪಡಿಸಿಕೊಳ್ಳಲು ಪೋಲೀಸ್ ಮತ್ತು ಜಿಲ್ಲಾಡಳಿತಕ್ಕೆ ನಿರ್ದೇಶನಗಳನ್ನು ನೀಡಿ, ಮತ್ತು ಅಗತ್ಯವಿದ್ದಲ್ಲಿ ಸ್ವಯಂ ಪ್ರೇರಿತ ದೂರು ದಾಖಲಿಸಬೇಕು.
3. ಎಲ್ಲಾ ನಾಗರಿಕರು ತಮ್ಮ ಮೂಲಭೂತ ಹಕ್ಕುಗಳನ್ನು ನಿರ್ಭೀತಿಯಿಂದ ಚಲಾಯಿಸಲು ಸಮರ್ಥರಾಗಿದ್ದಾರೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು ಮತ್ತು ದಕ್ಷಿಣ ಕನ್ನಡವನ್ನು ಆವರಿಸಿರುವ ಮತ್ತು ಅಲ್ಲಿನ ನಾಗರಿಕರು ತಮ್ಮ ಮೂಲಭೂತ ಹಕ್ಕುಗಳನ್ನು ಚಲಾಯಿಸದಂತೆ ತಡೆಯುತ್ತಿರುವ ಭಯದ ವಾತಾವರಣವನ್ನು ಹೋಗಲಾಡಿಸಲು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳಬೇಕು.
4. ಎಲ್ಲಾ ನಾಗರಿಕರು ಘನತೆಯಿಂದ ಬದುಕುವ ಹಕ್ಕನ್ನು ಆನಂದಿಸಲು ಅನುಕೂಲಕರ ವಾತಾವರಣವನ್ನು ಖಾತ್ರಿಪಡಿಸಬೇಕು.
5. ಧರ್ಮದ ಅಡೆತಡೆ ಗೋಡೆಗಳನ್ನು ಹೊಡೆಯಬಲ್ಲ ಪರಸ್ಪರ ಸಂವಹನ, ಪ್ರೀತಿ ಅಥವಾ ಪ್ರಣಯ ಸಂಬಂಧಗಳಲ್ಲಿ ತೊಡಗಿಸಿಕೊಳ್ಳಲು ನಾಗರಿಕರಿಗೆ ಇರುವ ಹಕ್ಕನ್ನು ರಕ್ಷಿಸಿ.
6. ಧರ್ಮ ಅಥವಾ ಲಿಂಗವನ್ನು ಲೆಕ್ಕಿಸದೆ ತಮ್ಮ ಆಯ್ಕೆಯ ಇತರ ಜನರೊಂದಿಗೆ ಸಾರ್ವಜನಿಕ ಸ್ಥಳಗಳಲ್ಲಿ ಸೇರಲು ನಾಗರಿಕರಿಗೆ ಇರುವ ಹಕ್ಕುಗಳನ್ನು ರಕ್ಷಿಸಿ.

**ಎ. ಜಿಲ್ಲಾಡಳಿತಕ್ಕೆ**

1. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೋಮು ಶಾಂತಿ ಕದಡುವ ಎಲ್ಲರ ವಿರುದ್ಧ ಕ್ರಮ ಕೈಗೊಳ್ಳಿ ಮತ್ತು ಅಂತಹ ಘಟನೆಗಳನ್ನು ಪರಿಣಾಮಕಾರಿಯಾಗಿ ತಡೆಗಟ್ಟಲು ಕ್ರಮ ಕೈಗೊಳ್ಳಬೇಕು.
2. ನಿರ್ದಿಷ್ಟವಾಗಿ, ಅಪರಾಧಿಕ ಮತ್ತು ಕಾನೂನುಬಾಹಿರ ದ್ವೇಷ ಅಪರಾಧಗಳು ಅಥವಾ ಮತೀಯ ಗೂಂಡಾಗಿರಿ ಕೃತ್ಯಗಳನ್ನು ಮಾಡಿದವರು ಅಥವಾ ಬೆದರಿಕೆ ಹಾಕುತ್ತಿರುವವರಿಂದ ಉತ್ತಮ ನಡವಳಿಕೆಗಾಗಿ ಮತ್ತು ನಡೆದುಕೊಳ್ಳದ್ದಿದ್ದಾರೆ ಕಠಿಣ ಕ್ರಮತೆಗೆದುಕೊಳ್ಳುವುದಾಗಿ ತಿಳಿಸಿ ಬಾಂಡ್ ಅನ್ನು ತೆಗೆದುಕೊಳ್ಳಬೇಕು.

3. ತಥಾಕಥಿತ (ಸೋಕಾಲ್ಡ್) ನೈತಿಕತೆಯ ಜಾರಿಗಾಗಿ ಮುಗ್ಧ ಜನರನ್ನು ಪೊಲೀಸ್ ಠಾಣೆಗೆ ಕರೆದುಕೊಂಡು ಬರುವುದು ಕಾನೂನುಬಾಹಿರ ಮತ್ತು ಇಂತಹ ಕಾನೂನು ಬಾಹಿರ ಕೃತ್ಯವೆಸಗುವ ಗುಂಪುಗಳ ವಿರುದ್ಧ ಪೊಲೀಸರು ಕ್ರಮ ತೆಗೆದುಕೊಳ್ಳುತ್ತಾರೆ ಎಂಬುವುದನ್ನು ಸಾರ್ವಜನಿಕರಿಗೆ ಅರಿವು ಮೂಡಿಸಲು ಅಭಿಯಾನವನ್ನು ಕೈಗೊಳ್ಳಬೇಕು.
4. ಜಿಲ್ಲಾಧಿಕಾರಿ ಅಲ್ಪಸಂಖ್ಯಾತ ಸಮುದಾಯದ ಸದಸ್ಯರೊಂದಿಗೆ ನಿಯಮಿತ ಸಂವಾದದ ಮೂಲಕ ಆತ್ಮವಿಶ್ವಾಸವನ್ನು ಹೆಚ್ಚಿಸುವ ಕ್ರಮಗಳನ್ನು ಪ್ರಾರಂಭಿಸಬೇಕು ಮತ್ತು ಕುಂದುಕೊರತೆಗಳನ್ನು ಆಲಿಸಲು ಮತ್ತು ಸರಿಪಡಿಸಲು ನಿರ್ದಿಷ್ಟ ದಿನಗಳನ್ನು ನಿಗದಿಪಡಿಸಬೇಕು.

**ಬಿ. ಜಿಲ್ಲಾ ಪೊಲೀಸ್ ಆಡಳಿತಕ್ಕೆ**

1. ದ್ವೇಷದ ಅಪರಾಧ ಅಥವಾ ಕೋಮು ಹಿಂಸಾಚಾರದ ಪ್ರತಿಯೊಂದು ಪ್ರಕರಣದಲ್ಲಿ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಖಚಿತಪಡಿಸಿಕೊಳ್ಳಬೇಕು ಮತ್ತು ಸಂತ್ರಸ್ತರು ದೂರು ನೀಡಲು ಭಯಪಡುವ ಸಂದರ್ಭಗಳಲ್ಲಿ, ಸ್ವಯಂ ಪ್ರೇರಿತ ದೂರನ್ನು ನೋಂದಾಯಿಸಬೇಕು. ಈ ಕುರಿತು ಸುತ್ತೋಲೆಯನ್ನು ಹೊರಡಿಸಬೇಕು.
2. ಇಲ್ಲಿಯವರೆಗೆ ಸಂಭವಿಸಿದ ದ್ವೇಷದ ಅಪರಾಧ ಮತ್ತು ಮತೀಯ ಗೂಂಡಾಗಿರಿಯ ಎಲ್ಲಾ ಪ್ರಕರಣಗಳಲ್ಲಿ ಎಫ್‌ಐಆರ್ ದಾಖಲಿಸಬೇಕು ಮತ್ತು ಇಂತಹ ಪ್ರಕರಣಗಳಲ್ಲಿ ಎಫ್‌ಐಆರ್‌ಗಳು ದಾಖಲಾಗದಿದ್ದಲ್ಲಿ ಎಫ್‌ಐಆರ್‌ಗಳು ದಾಖಲಾಗಬೇಕು.
3. ದ್ವೇಷದ ಅಪರಾಧ ಮತ್ತು ಮತೀಯ ಗೂಂಡಾಗಿರಿಯ ಎಲ್ಲಾ ಪ್ರಕರಣಗಳಿಗೆ ಸಂಬಂಧಿಸಿದಂತೆ ತನಿಖೆಯನ್ನು ತ್ವರಿತವಾಗಿ ನಡೆಸಲಾಗುತ್ತಿದೆ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.
4. ನಿರ್ದಿಷ್ಟವಾಗಿ ದ್ವೇಷದ ಅಪರಾಧಗಳು ಮತ್ತು ಮತೀಯ ಗೂಂಡಾಗಿರಿಯನ್ನು ಹತ್ತಿಕ್ಕಿ ರಾಜ್ಯದಲ್ಲಿನ ಸಾಂವಿಧಾನಿಕ ಆಡಳಿತವನ್ನು ರಕ್ಷಿಸಲು ಪೊಲೀಸರು ತರಬೇತಿ ಪಡೆದಿದ್ದಾರೆಯೇ ಮತ್ತು ಸಂವೇದನಾಶೀಲರಾಗಿದ್ದಾರೆಯೇ ಎಂಬುದನ್ನು ಖಚಿತಪಡಿಸಿಕೊಳ್ಳಬೇಕು.

**ಸಿ. ನಾಗರಿಕ ಸಮಾಜಕ್ಕೆ**

1. ಕೋಮು ದ್ವೇಷದ ಅಪರಾಧಗಳು ಮತ್ತು ಸಾಮಾಜಿಕ ಪ್ರತ್ಯೇಕತೆಯ ವಿರುದ್ಧ ಪ್ರತಿಕ್ರಿಯೆ ನೀಡಿ ಮತ್ತು ಆ ನಿಟ್ಟಿನಲ್ಲಿ ವ್ಯವಹರಿಸಿ ಹಾಗೂ ಸಂವಿಧಾನದ ರಕ್ಷಣೆಗೆ ನಿಲ್ಲಿರಿ.

2. ಒಗ್ಗೂಡಿ ಸಹಬಾಳ್ವೆಯನ್ನು ನಡೆಸಿ ಹಾಗೂ ಕೋಮು ಮತ್ತು ಜಾತಿ ವಿಭಜನೆಗಳನ್ನು ಹೊಡೆದು ಐಕ್ಯತೆಯನ್ನು ರೂಪಿಸಿ.
3. ಅಂತರ ಸಮುದಾಯ ಸಂವಹನಗಳನ್ನು ಉತ್ತೇಜಿಸುವ ಕಾರ್ಯಕ್ರಮಗಳನ್ನು ಆಯೋಜಿಸಿ ಮತ್ತು ಆ ಮೂಲಕ ವಿವಿಧ ಸಮುದಾಯಗಳ ನಡುವೆ ಸಹೋದರತ್ವ ಸಂಬಂಧಗಳನ್ನು ಉತ್ತೇಜಿಸಿ.
4. ಮತೀಯ ಗೂಂಡಾಗಿರಿ ಮತ್ತು ಕೋಮು ದ್ವೇಷದ ಅಪರಾಧಗಳು ಸಂಭವಿಸಿದಾಗ, ಅದರ ವಿರುದ್ಧ ಸಾಂವಿಧಾನಿಕ ಹಕ್ಕುಗಳನ್ನು ರಕ್ಷಿಸುವುದಕ್ಕಾಗಿ ಸಾರ್ವಜನಿಕರು ಧ್ವನಿಗೂಡಿಸಬೇಕಾಗಿರುವುದರ ಅಗತ್ಯತೆಯ ಬಗ್ಗೆ ಸಾರ್ವಜನಿಕರಿಗೆ ಜಾಗೃತಿ ಮೂಡಿಸಿ.